## ಟಾಕೀಸ್ ಮುಚ್ಚಲು ಇಷ್ಟು ಸಾಕು

ಕಳೆದ ವಾರದಿಂದ ಕಲರ್ಸ್ ಕನ್ನಡ ವಾಹಿನಿಯವರ ಮತ್ತೊಂದು ವಾಹಿನಿ ಹೊಸದಾಗಿ ಪ್ರಾರಂಭಗೊಂಡಿದೆ. ತನ್ನ ಪ್ರಸಾರಕ್ಕೆ ಅದು ಮೊದಲು ಆಯ್ಕೆ ಮಾಡಿಕೊಂಡಿದ್ದು ತೀರಾ ಇತ್ತೀಚೆಗೆ ಬಿಡುಗಡೆಯಾದ ಜಿಗರ್ ಥಂಡ ಚಿತ್ರವನ್ನು. ಈ ಪ್ರಸಾರ ನೋಡಿದಾಗ ಈಗಾಗಲೇ ಪ್ರೇಕ್ಷಕರೇ ಇರದೆ ಖಾಲಿ ಹೊಡೆಯುತ್ತಿರುವ ಚಿತ್ರ ಮಂದಿರಗಳು ಇನ್ನು ಕೆಲವೇ ದಿನಗಳಲ್ಲಿ ಶಾಶ್ವತವಾಗಿ ಬಂದ್ ಆಗುವುದು ಖಚಿತ ಎನಿಸಿತು. ಗುಬ್ಬಿ ಗರುಡನ ಮೇಲೆ ಸವಾರಿ ಮಾಡುವುದು ಎಂದರೆ ಇದೇನಾ?

—ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## ಭಾಷೆ ಶುದ್ಧವಿರಲಿ

ಕನ್ನಡದ ಖಾಸಗಿ ಸುದ್ದಿ ವಾಹಿನಿಗಳು ಜಿದ್ದಿಗೆ ಬಿದ್ದವರಂತೆ ಸುದ್ದಿ ಪ್ರಸಾರ ಮಾಡುತ್ತಿವೆ. ಅಡಿಬರಹದಲ್ಲಿ ಪ್ರಕಟವಾಗುವ ಸುದ್ದಿಗಳಲ್ಲಿ ವಾಕ್ಯರಚನಾ ದೋಷಗಳು, ವ್ಯಾಕರಣ ದೋಷಗಳು ಕಣ್ಣಿಗೆ ರಾಚುವಂತಿರುತ್ತವೆ.

ಅದೇ ಕನ್ನಡ ಚಂದನ ವಾಹಿನಿಯಲ್ಲಿ ಪ್ರಸಾರವಾಗುವ ಎಲ್ಲಾ ಕಾರ್ಯಕ್ರಮಗಳು ಹೃದಯಸ್ಪರ್ಶಿಯಾಗಿರುತ್ತವೆ. ದೃಶ್ಯಾವಳಿಗಳು, ನಿರೂಪಕರ ಮಾತುಗಳು, ಇತರೆ ಕಾರ್ಯಕ್ರಮಗಳಿಗೆ ವೀಕ್ಷಕರ ಮನಸ್ಸನ್ನು ವಶೀಕರಣಗೊಳಿಸುವ ಸಾಮರ್ಥ್ಯವಿದೆ.

—ಕೆ.ಜಿ.ಶೇಖರಪ್ಪ, ಅರಸೀಕೆರೆ

## ಕಿನ್ನರಿಯ ಕಿರಿಕಿರಿ

ಧಾರಾವಾಹಿ ಮುಂದೆ ಏನಾಗುತ್ತದೆ ಎಂಬ ಕುತೂಹಲವಿರಬೇಕು. ಆದರೆ ಇದಕ್ಕೆ ತದ್ವಿರುದ್ಧವಾಗಿ ಕಿನ್ನರಿ ಮೂಡಿ ಬರುತ್ತಿದೆ. ಅಷ್ಟೇ ಅಲ್ಲ, ಮೈ ಉರಿಯುತ್ತದೆ. 'ಇರಲಾರದವರು ಇರುವೆ ಬಿಟ್ಟುಕೊಂಡರು' ಎನ್ನುವಂತೆ ಸುಧಾ ಸೌಮ್ಯಳನ್ನು ಮನೆಯಲ್ಲಿ ಇರಿಸಿಕೊಳ್ಳುತ್ತಾಳೆ. ಮನಸ್ಸು ಕೆಡಿಸಿಕೊಂಡು ಒಬ್ಬಂಟಿಯಾಗಿ ಕೊರಗುತ್ತಾಳೆ. ಇನ್ನು ಗಂಡ ಅನ್ನಿಸಿಕೊಂಡ ಪ್ರಾಣಿ ಪ್ರಪಂಚದ ಎಲ್ಲಾ ವಿಷಯಗಳನ್ನು ಮಾತನಾಡುತ್ತಾನೆ. ಅಷ್ಟೇ ಅಲ್ಲ ತನ್ನ ಸ್ವಂತ ಮಗಳು ಮಣಿಯನ್ನು ಬಿಟ್ಟು ಎಲ್ಲರನ್ನೂ ಗುರುತಿಸುತ್ತಾನೆ. ಮಣಿ ಯಾರು ಎಂದು ಅವನಿಗೆ ಗೊತ್ತಾಗುವುದೇ ಇಲ್ಲ. ಫೋನ್‌ನಲ್ಲಿ ಸಂಭಾಷಣೆ ಮನಸ್ಸು ಕೆರಳುವಂತೆ ಮಾಡುತ್ತದೆ. ಇನ್ನು ಮಣಿ ಪಾತ್ರಧಾರಿಯ ವಯಸ್ಸಿಗೆ ಮೀರಿದ ಮಾತುಗಳು ಸಹಿಸಿಕೊಳ್ಳಲು ನಿಜವಾಗಿಯೂ ಅಸಾಧ್ಯ. ಇವನ್ನೆಲ್ಲ ಬಡಪಾಯಿ ವೀಕ್ಷಕ ಸಹಿಸಿಕೊಳ್ಳಬೇಕೆ?

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ವಾರದ ಪತ್ರ

## ಕಥಾ ಹಂದರ ಬದಲಾಗಬೇಡವೇ?

ಐವತ್ತು ವರ್ಷಕ್ಕೂ ಹಿಂದೆ ನಾನು ನಮ್ಮೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮೂರಿನಲ್ಲಿದ್ದುದು ಒಂದೇ ಒಂದು (ಥಿಯೇಟರ್) ಸಿನಿಮಾ ಟಾಕೀಸು. ಪ್ರತಿ ದಿನ ನಾಲ್ಕು ಗಂಟೆಗೆ ಸಿನಿಮಾ ಪೋಸ್ಟರ್ ಅಂಟಿಸಿಕೊಂಡ ಎತ್ತಿನಗಾಡಿ ಪ್ರತಿಯೊಂದು ಬೀದಿಗೂ ಬರುತ್ತಿತ್ತು. ಆಗಾಗ್ಗೆ ಸಿನಿಮಾ ಚೀಟಿಯನ್ನು ರಸ್ತೆಗೆ ಎಸೆಯುತ್ತಿದ್ದರು. ನಾವು ಸಣ್ಣ ಮಕ್ಕಳು ಆ ಚೀಟಿಯ ಆಸೆಗಾಗಿ ಗಾಡಿ ಹಿಂದೆ ಓಡುತ್ತಿದ್ದೆವು. ಏಕೆಂದರೆ ಚೀಟಿಯಲ್ಲಿ ಎರಡು ವಾಕ್ಯ ಕಥೆ ಇದ್ದು 'ಮುಂದಿನ ಕಥೆಯನ್ನು ರಜತ ಪರದೆಯ ಮೇಲೆ ನೋಡಿ ಆನಂದಿಸಿ' ಎಂದಿರುತ್ತಿತ್ತು.

ಈಗಿನ ಧಾರಾವಾಹಿಗಳನ್ನು ವೀಕ್ಷಿಸುವಾಗ 15–20 ಕಂತುಗಳನ್ನು ರಜತ ಪರದೆಯ ಮೇಲೆ ನೋಡುವ ಮೊದಲೇ ಬರೆದಿಡಬಹುದು. ಹೊಡೆದಾಟ, ಸಂಭಾಷಣೆ ಇತ್ಯಾದಿಯಾಗಿ ಪ್ರತಿಯೊಂದನ್ನೂ ಅಕ್ಕ ಪಕ್ಕದವರಿಗೂ ಮನೆಯವರಿಗೂ ಹೇಳಿರುತ್ತೇನೆ. ನನ್ನ ಊಹೆಯಂತೆಯೇ ಎಲ್ಲಾ ವಾಹಿನಿಗಳಲ್ಲೂ ಧಾರಾವಾಹಿಗಳು ಮುಂದುವರೆಯುತ್ತವೆ. ಓಟವಿಲ್ಲದ ಕಥೆ, ಹೇಳಿದ್ದನ್ನೇ ಹೇಳುವ ಸಂಭಾಷಣೆ. ಆದರೆ ವೀಕ್ಷಕರಿಗೆ ಬದಲಾವಣೆ ಬೇಕೆಂದು ನಿರ್ಮಾಪಕ, ನಿರ್ದೇಶಕರಿಗೇಕೆ ಎನಿಸುವುದಿಲ್ಲ.

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ಓಂ ಶಾಂತಿ ಮತ್ತು ಪವಾಡ

'ಓಂ ಶಾಂತಿ'ಯಲ್ಲಿ ಪವಾಡ ಸ್ತ್ರೀ ಶಾಂತಿ, ತನ್ನ ಅಗಾಧ ದೈವೀ (ದೈತ್ಯ) ಶಕ್ತಿಯಿಂದ ಪಾತಕಿಗಳನ್ನು ಹೊಡೆದೋಡಿಸುತ್ತಾಳೆ! ಆದರೆ ಈ ದೇವಿ ಗಂಡನ ಮೇಲೆ ಮಾರಣಾಂತಿಕ ಹಲ್ಲೆ ನಡೆದಾಗ ಏಕೆ ಸುಮ್ಮನೆ ನಿಂತು ನೋಡುತ್ತಿರುತ್ತಾಳೆ? ಬಹುಶಃ ಆಸ್ಪತ್ರೆಯಲ್ಲಿ, ತಜ್ಞವೈದ್ಯರು ಕೈಚೆಲ್ಲಿ ಕುಳಿತಾಗ, ಈ ವಿಶೇಷ (ಮೀಸಲು) ಅಸ್ತ್ರ ಬಳಸಲಿದ್ದಾಳೆಯೆ? ಈ ಧಾರಾವಾಹಿಗೆ 'ಶಾಂತಮ್ಮನ ಪವಾಡಗಳು' ಎಂದು ಹೆಸರಿಟ್ಟಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು.

—ಗೋಪಾಲ ಆಶ್ರಿತ, ಬೆಂಗಳೂರು



## ಮನೆ ಮುರಿಯಬೇಡಿ

ಟಿ.ವಿ. ಮನರಂಜನೆ ನೀಡುವುದು ಮಾತ್ರವಲ್ಲದೆ, ಮೂಢನಂಬಿಕೆಗಳನ್ನು ದೂರ ಮಾಡಬೇಕು. ಇದಕ್ಕೆ ಧಾರಾವಾಹಿಗಳು ಮಾದರಿಯಾಗಬೇಕು. ಮನೆ ಹಾಳು ಮಾಡುವ ಧಾರಾವಾಹಿಗಳನ್ನು ಕಮ್ಮಿ ಮಾಡಲಿ. ಸುವರ್ಣದಲ್ಲಿ ಮೂಡಿಬರುವ 'ಹರ ಹರ ಮಹಾದೇವ' ಚೆನ್ನಾಗಿ ಮೂಡಿಬರುತ್ತಿದೆ ಮತ್ತು 'ಮಹಾದೇವಿ' ಚೆನ್ನಾಗಿದೆ.

—ಆಯಿಷಾ, ಉಜಿರೆ

## ರಬ್ಬರ್ ಎಳೆತ

ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುವ ಅನೇಕ ಧಾರಾವಾಹಿಗಳು ಸುಳ್ಳಿನ ಸರಮಾಲೆಯನ್ನು ಕಟ್ಟುತ್ತಿರುವುದು ವೀಕ್ಷಕರಿಗೆ ಬೇಸರವನ್ನು ತರಿಸಿದೆ. 'ಪುಟ್ಟ ಗೌರಿ ಮದುವೆ', 'ಲಕ್ಷ್ಮೀ ಬಾರಮ್ಮ', 'ಅಕ್ಕ', 'ಕುಲವಧು' ಹಲವು ಧಾರಾವಾಹಿಗಳ ಸರಮಾಲೆಯಲ್ಲಿ ಸುಳ್ಳು ಬಿಟ್ಟರೆ ಯಾವುದೇ ರೀತಿಯ ಮನರಂಜನೆಯೂ ಇಲ್ಲ. ಕುಂಟು ನೆಪಗಳನ್ನು ಕಟ್ಟುತ್ತಾ ಈ ಧಾರಾವಾಹಿಗಳನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ. ಧಾರಾವಾಹಿಗಳಲ್ಲಿ ಮನರಂಜನೆಯೂ ಇರಲಿ.

—ಪ್ರಮೀಳಾ, ಉಜಿರೆ

## ಅಭಿನಂದನೀಯ ಜೂನಿಯರ್ಸ್

ಝೀ ವಾಹಿನಿಯ 'ಡ್ರಾಮಾ ಜೂನಿಯರ್ಸ್' ವಾರದಿಂದ ವಾರಕ್ಕೆ ಉತ್ತಮವಾಗಿ ಮೂಡಿ ಬರುತ್ತಿದೆ. ಸಾಮಾಜಿಕ ಕಳಕಳಿ, ಕುಟುಂಬದಲ್ಲಿ ಪರಸ್ಪರರ ನಡುವೆ ಸೌಹಾರ್ದ ಭಾವನೆ ಮೂಡಿಸುವ, ಭಾವನಾತ್ಮಕ, ನಗೆ ಹರಿಸುವಂತಹ ಅಂಶಗಳುಳ್ಳ ಚಿಕ್ಕ ಚಿಕ್ಕ ಪ್ರಹಸನಗಳು ರಂಜಿಸುವಲ್ಲಿ ಯಶಸ್ವಿಯಾಗಿವೆ. ಆ.6 ಮತ್ತು 7ರಂದು ಜೂನಿಯರ್ಸ್ ಜೊತೆಗೆ ಅವರ ಕುಟುಂಬದ ಪೋಷಕರು (ತಂದೆ, ತಾಯಿ) ಮತ್ತು ಮಾಸ್ಟರ್ ಆನಂದ್ ಸೇರಿ ನಡೆಸಿಕೊಟ್ಟ ಕಾರ್ಯಕ್ರಮ ಚೆನ್ನಾಗಿತ್ತು. ಮಕ್ಕಳ ಜೊತೆ ಹಿರಿಯರು ಹಿಂಜರಿಕೆ, ಮುಜುಗರವಿಲ್ಲದೆ ತಮಗೆ ಕೊಟ್ಟ ಪಾತ್ರವನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಅಭಿನಯಿಸಿ ವೀಕ್ಷಕರ ಗಮನ ಸೆಳೆದಿದ್ದಾರೆ.

ಕ್ರೌರ್ಯ ಸೇಡು, ಹಗೆ, ಪಿತೂರಿಗಳಿಂದ ಕೂಡಿದ ಧಾರಾವಾಹಿಗಳನ್ನು ನೋಡಿ ಬೇಸತ್ತಿದ್ದ ಪ್ರೇಕ್ಷಕರಿಗೆ ಈ ಡ್ರಾಮಾ ಜೂನಿಯರ್ಸ್ ಕಾರ್ಯಕ್ರಮ ಹಸಿದವರಿಗೆ ಮೃಷ್ಟಾನ್ನ ಭೋಜನ ಬಡಿಸಿದಂತಾಗಿದೆ.

ಹುಟ್ಟು ಕಲಾವಿದರಾದ ಈ ಪುಟ್ಟ ಪುಟ್ಟ ಮಕ್ಕಳ ಮುಗ್ಧ ಮನಸ್ಸಿಗೆ ನೋವಾಗದಂತೆ, ಪುಟಾಣಿಗಳ ಹೂವಿನಂತಹ ಎಳೆ ಮನಸ್ಸಿನ ಮೇಲೆ ಬರೆ ಎಳೆಯಬಾರದಾಗಿ ವಿನಂತಿ. ಈ ಪುಟ್ಟ ಬಾಲ ಪ್ರತಿಭೆಗಳನ್ನು ತಿದ್ದಿ ತೀಡಿ, ಕಟೆದು ಅವರಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತೆಗೆದ ಮೆಂಟರ್‌ಗಳಿಗೆ ಎಷ್ಟು ಧನ್ಯವಾದಗಳನ್ನು ಹೇಳಿದರೂ ಕಡಿಮೆಯೆ.

—ಗುರುರಾವ್ ನಾಡಿಗೇರ್, ಸೊರಬ ವಿಭಾ ಮುರಳೀಧರ್, ತುಮಕೂರು; ಅಕ್ಷತಾ, ಉಜಿರೆ

## ಹಾಲು ಕುಡಿದಂತಾಯ್ತು

'ಶ್ರೀರಸ್ತು ಶುಭ ಮಸ್ತು' ಧಾರಾವಾಹಿ ಕೊನೆಗೂ ಕೊನೆಗೊಂಡಿದೆ ಎಂದು ಜಾಣರ ಪೆಟ್ಟಿಗೆಯಿಂದ ತಿಳಿದು ಹಾಲು ಕುಡಿದಷ್ಟು ಸಂತೋಷವಾಯಿತು. ಮೊದಲು ದಿನಾಲೂ 7 ಗಂಟೆ ಆಗುವುದನ್ನೇ ಕಾಯುತ್ತಿದ್ದೆ ನಾನು. ಆದರೆ ಕೊನೆಕೊನೆಗೆ ಯಾವಾಗ ಮುಗಿಯುತ್ತದೋ ಎನಿಸುತ್ತಿತ್ತು.

—ದಿನೇಶ್